ತನ್ನ ಕೈ ಸೋಕಿದ ಆ ಬೆಚ್ಚನೆಯ ಬೆರಳುಗಳ ನಡುಕ ಅಕ್ಕುವಿನ ಹಣೆಯಲ್ಲಿ ಬೆವರು ಮೂಡಿಸಿತ್ತು. ಆಫೀಸು ಕೋಣೆಯ ಒಳಹೋಗುವ ಮೊದಲು, "ಗುಡಿಸಿದ ನಂತರ ಹಿಡಿಸೂಡಿಯನ್ನು ಹಿಂದಿನ ಕೋಣೆಯಲ್ಲಿ ಇಟ್ಟುಬಿಡು" ಎಂದ ಮಾಸ್ತರ ದನಿಯಲ್ಲೂ ನಡುಕವಿತ್ತು. ಅರೆಬರೆ ಗುಡಿಸಿದ ಅಕ್ಕು ಗಂಜಿಕೋಣೆಯ ಒಳಹೊಕ್ಕು ಹಿಡಿಸೂಡಿಯನ್ನು ಮೂಲೆಗೆ ಒರಗಿಸುವಷ್ಟರಲ್ಲೇ ಮಾಸ್ತರೂ ಒಳಬಂದಾಗಿತ್ತು. ಅಕ್ಕುವಿನ ಎದೆ ಬಡಿತ ಅವಳಿಗೇ ಕೇಳುವಂತಿತ್ತು. ಕ್ಷಣವೊಂದು ಯುಗವಾಯ್ತೋ? ಎಂಬಂತೆ ಕಣ್ಣುಮುಚ್ಚಿ ಗೋಡೆಗೊರಗಿದವಳ ಸೊಂಟದ ಸೀರೆಯ ಗಂಟನ್ನು ಮಾಸ್ತರ ಕೈ ಇನ್ನೇನು ಸ್ಪರ್ಶಿಸಬೇಕು ಅನ್ನುವಷ್ಟರಲ್ಲಿ, ಅಕ್ಕುವಿನ ಬಲ ಬದಿಯಿಂದ ಸೌದೆಯ ರಾಶಿಯ ಹಿಂದಿನಿಂದ "ಮ್ಯೇ" ಎಂದು ಅರಚುತ್ತಾ ಬೆಳ್ಳನೆ ಆಡೊಂದು ಚಂಗನೆ ನೆಗೆದಿತ್ತು. ಅರೆಜೋಮಿನಲ್ಲಿದ್ದವಳಿಗೆ ಕಪಾಳಕ್ಕೆ ಬಾರಿಸಿದಂತಾಗಿ ದಿಗ್ಗನೆ ಕಣ್ಣು ತೆರೆದಿದ್ದಳು ಅಕ್ಕು. ಅವಳು ಗಾಬರಿಯಿಂದ ಎಚ್ಚೆತ್ತುಕೊಳ್ಳುವ ಮೊದಲೇ ಸಾವರಿಸಿಕೊಂಡ ಮಾಸ್ತರು ಧಡಲ್ಲನೆ ಗಂಜಿಕೋಣೆಯ ಬಾಗಿಲನ್ನೂ ತೆರೆದು ಹೊರಹೋಗಿದ್ದರು. ಅಲ್ಲೇ ಕುಸಿದು ಕುಳಿತಿದ್ದಳು ಅಕ್ಕು. ''ಓ ದೇವರೇ, ಏನಾಗುತ್ತಿತ್ತು ಈಗ?... ತಾನೇನು ಮಾಡಲು ಹೊರಟಿದ್ದೆ? ತನಗೆ ಅಂತಕ್ಕ ಹೇಳಿದಂತೆ ನಿಜಕ್ಕೂ ರಾವು ಬಡಿದಿರಬೇಕು... ಇಲ್ಲದಿದ್ದರೆ?... ಛೆ ಒಂದು ನಿಮಿಷ ಕಳೆದಿದ್ದರೆ ತನಗೆ ಅಂತಕ್ಕನಿಗೆ ಮುಖ ತೋರಿಸುವ ಅರ್ಹತೆ ಇರುತ್ತಿತ್ತೆ? ಬಹುಶಃ ತಾನು ನಂಬುವ ಕಲ್ಲುರ್ಟಿ ಅಪ್ಪೆಯೇ ಆಡಿನ ರೂಪದಲ್ಲಿ ಬಂದು ತನ್ನನ್ನು ಉಳಿಸಿರಬೇಕು. ಹೇ ದೇವರೇ" ಅಕ್ಕುವಿಗೆ ಆ ನಿಮಿಷದಲ್ಲಿ ತನ್ನ ಮೇಲೆಯೇ ಅಸಹ್ಯ ಉಕ್ಕಿ ಬಂದಿತ್ತು. ಗೋಡೆಗೆ ಕೈಗೊಟ್ಟು ಹೇಗೋ ಎದ್ದು ಬಂದವಳು ವರಾಂಡ ದಾಟುವಾಗ ಮಾಸ್ತರ ದುರ್ಬಲವಾದ ಸ್ವರ ಕಿವಿಗೆ ಬಿದ್ದಿತ್ತು. "ಮಗು ಸೋಮವಾರ ಶಾಲೆಗೆ ಬರಲಿ. ನೀನು ಬರಬೇಕೆಂದಿಲ್ಲ."

ಬೀಸಾಗಿ ಹೆಜ್ಜೆಯಿಕ್ಕುತ್ತಾ ಬಂದ ಅಕ್ಕುವಿನ ಬರಿಗೈಯ್ಯನ್ನು ನೋಡಿ ರಮೇಶನಿಗೆ ನಿರಾಶೆಯಾಗಿತ್ತು, ಸಂತೆಗೆ ಹೋದ ಅಮ್ಮ ತರುವ ಪೆಪ್ಪರ್‌ಮಿಂಟಿಗೋಸ್ಕರ ಅಜ್ಜಿಯ ಜೊತೆಗೆ ಗುತ್ತಿಗೂ ಹೋಗದೆ ಕಾದು ಕುಳಿತವ ಅಮ್ಮನನ್ನು ಕಂಡೊಡನೆ, "ಏನೂ ತರಲಿಲ್ಲನೇ" ಎಂದು ಮುಖ ಉಬ್ಬಿಸಿದ್ದ. ಅಕ್ಕು ಉತ್ತರಿಸದೆ ಮಗನನ್ನು ಬಾಚಿ ತಬ್ಬಿ ಆ ಉಬ್ಬಿದ ಕೆನ್ನೆಗೆ ಮುತ್ತಿಕ್ಕಿದ್ದಳು. ಅಮ್ಮನ ಕೆನ್ನೆಯಿಂದಿಳಿದ ಕಣ್ಣೀರನ್ನು ತೊಡೆಯುತ್ತಾ, "ಬಿದ್ದೆಯೇನೆ ಅಮ್ಮಾ? ಯಾಕಳುತ್ತೀ?" ಎಂದವನ ಮಾತಿಗೆ, "ಬೀಳುತ್ತಿದ್ದೆ ಮಗನೇ. ಆ ಕಲ್ಲುರ್ಟಿಯೇ ಕಾಪಾಡಿದಳು" ಎಂದು ಮನಸ್ಸಿನಲ್ಲಿಯೇ ಉತ್ತರಿಸಿ ಇನ್ನಷ್ಟು ಬಿಗಿಯಾಗಿ ಮಗನನ್ನು ಅಪ್ಪಿಕೊಂಡಿದ್ದಳು ಅಕ್ಕು. ಮುಂದೆ ಹದಿನೈದು ದಿನ ಕಳೆದು ಬಂದ ಗೋಪಾಲಣ್ಣ ರಮೇಶನನ್ನೂ, ಅವರ ಮಗ ಕಿನ್ಯಣ್ಣನನ್ನೂ ಒಟ್ಟಿಗೆ ಶಾಲೆಗೆ ಸೇರಿಸಿದ್ದರು. ಅದೇ ಕೊನೆ! ಆಮೇಲೆ ಒಮ್ಮೆ ಕೂಡ ಮಾಸ್ತರ ನೆರಳು ಬೀಳುವ ಹಾದಿಯಲ್ಲೂ ಸುಳಿದಿರಲಿಲ್ಲ ಅಕ್ಕು. (ಬಹುಶಃ ಇವಳ ನೆರಳಿದ್ದೆಡೆ ಮಾಸ್ತರೂ ಬಂದಿರಲಿಕ್ಕಿಲ್ಲ). ರಮೇಶನನ್ನು ಐದನೇ ಕ್ಲಾಸಿಗೆ ಪೇಟೆ ಶಾಲೆಗೆ ಸೇರಿಸಲು ಟಿ.ಸಿ ತೆಗೆದದ್ದೂ ಗೋಪಾಲಣ್ಣನೆ. ಅದರೆಡೆಯಲ್ಲಿ ಮಯ್ಯರು ತೀರಿ ಹೋದದ್ದೂ, ದೇವಕಿಗೆ ಒಂದು ಗಂಡು ಮಗುವಾದದ್ದೂ ಮಾಂಕುವಿನ ಬಾಯಿಂದ ಯಾವಾಗಲೋ ಕೇಳಿ ತಿಳಿದಿತ್ತು.

ಮಾಸ್ತರ ಕ್ಯಾಕರಿಸುವಿಕೆಗೆ ಇಹಲೋಕಕ್ಕೆ ಬಂದ ಅಕ್ಕು ಪೂಜಾರ್ತಿ, "ನೀವು ಬಂದದ್ದು ರಮೇಶನನ್ನು ನೋಡಲಿಕ್ಕಾ ಮಾಸ್ತರೆ? ಅವನು ಬರುವಾಗ ಗಂಟೆ ಆರು ಆದೀತಲ್ಲ" ಎಂದಾಗ ಮಾಸ್ತರಿಗೂ ಚೂರು ಇರುಸುಮುರುಸು ಕಡಿಮೆ ಆದಂತಾಗಿರಬೇಕು. ಮುಖದಲ್ಲಿ ಒಂಚೂರು ನಿರಾಳತೆ ಎದ್ದು ಕಂಡಿತು. "ಇಲ್ಲ ಪೂಜಾರ್ತಿಯರೇ... ನಾನು ನಿಮ್ಮನ್ನೇ ಕಾಣಲು ಬಂದವ. ರಮೇಶನನ್ನು ನಾನು ಕಳೆದ ತಿಂಗಳೇ ಮಾತನಾಡಿಸಿದ್ದೆ. ನಮ್ಮದು ಎಯ್ಡೆಡ್ ಶಾಲೆ ಅಲ್ಲವಾ? ಮಾವ ತೀರಿ ಹೋದ ಮೇಲೆ ಮ್ಯಾನೇಜ್ಮೆಂಟ್ ಅವರ ಅಕ್ಕನ ಮಗನ ಕೈಗೆ ಹೋಯ್ತು. ನಾನು ರಿಟಾಯರ್ ಆಗಿ ವರ್ಷ ಹತ್ತು ಕಳೆಯಿತು. ಒಬ್ಬನೇ ಮಗ ಮಾಸ್ತರ್ ಆಗಿ ನಮ್ಮದೇ ಶಾಲೆಯಲ್ಲಿದ್ದಾನೆ. ಎರಡು ವರ್ಷ ಆಯಿತು.